**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ಮಂಜುನಾಥ್ | | **ಪಿ.ಡಬ್ಲ್ಯೂ–** 10 |
| **ತಂದೆಯ ಹೆಸರು** | : ಕೃಷ್ಣಪ್ಪ | | **ಸಿ.ಡಬ್ಲ್ಯೂ–** 20 |
| **ವಯಸ್ಸು** | : 40 ವರ್ಷ | | |
| **ಉದ್ಯೋಗ** | : ಗಾರೆ ಕೆಲಸ | | |
| **ವಾಸಸ್ಥಳ** | : ಬೆಲವತ್ತಾ ಗ್ರಾಮ. | | |

**ಸಾಕ್ಷಿಯನ್ನು ಈ ದಿನ ದಿ:07.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ನಾನು ದಾಖಲೆಗೆ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–15(ಬಿ) ಎಂದು ಗುರುತಿಸಲಾಯಿತು. ನಾನು 5–6 ವರ್ಷಗಳ ಹಿಂದೆ ನಾನು ಸದರಿ ದಾಖಲೆಗೆ ಬೆಲವತ್ತಾ ಗ್ರಾಮದ ಮಹದೇವ ಹೋಟೆಲ್ ಬಳಿ ಸಹಿ ಮಾಡಿರುತ್ತೇನೆ. ಗೋಪಾಲ್ ರವರ ಜಮೀನಿನ ಸರ್ವೇ ಬಂದಿರುತ್ತಾರೆಂದು ಹೇಳಿ ಪೊಲೀಸರು ಮಹಜರಿಗೆ ಸಹಿ ಮಾಡಲು ಹೇಳಿದ್ದು ಸಹಿ ಮಾಡಿರುತ್ತೇನೆ.

**2.** ಸದರಿ ಮಹದೇವ ಹೋಟೆಲ್ ಗೋಪಾಲ್ ರವರ ಜಮೀನಿನಿಂದ 100 ಅಡಿಯಷ್ಟು ಅಂತರದಲ್ಲಿರುತ್ತದೆ. ಗೋಪಾಲ್ ರವರ ಜಮೀನಿನ ಬಳಿ ಹೋಗಿರುವುದಿಲ್ಲ. ಅಲ್ಲಿ ಯಾವುದೇ ಸಹಿ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**3.** ದಿಃ- 21.01.2020 ರಂದು ಗೋಪಾಲ್ ರವರ ಜಮೀನಿಗೆ ಪೊಲೀಸರು ಬಂದಿದ್ದರು, ನಾನು ಕೂಡ ಅಲ್ಲಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ಸ್ದ.ಳದಲ್ಲಿ ಗೋಪಾಲ್ ರವರು ಅದೇ ಸ್ಥಳದಿಂದ ದಿಃ- 19.01.2020 ರಂದು ಮೃತ ಮತ್ತು ಚಾ.ಸಾಃ2 ರವರು ಗೋಪಾಲ್ ರವರ ಮೇಕೆಯನ್ನು ಆಟೋದಲ್ಲಿ ಹಾಕಿಕೊಂಡು ಹೋಗಿರುವ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಪೊಲೀಸರು ನನ್ನ ಸಮಕ್ಷಮ ಮಹಜರ್ ಜರುಗಿಸಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**